ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1229
2	ಸದಸ್ಯರ ಹೆಸರು	:	ಶ್ರೀ ರಿಜ್ವಾನ್ ಅರ್ಷದ್
3	ಉತ್ತರಿಸುವ ದಿನಾಂಕ	:	21-12-2018
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 10 ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಾವ ಯಾವ ಆಸ್ತಿ ಮತ್ತು ಕಟ್ಟಡಗಳನ್ನು ಅಡಮಾನ ಇರಿಸಲಾಗಿದೆ; (ಆಸ್ತಿವಾರು ವರ್ಷವಾರು ವಿವರ ಒದಗಿಸುವುದು)</td><td>ಕಳೆದ 10 ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒಟ್ಟಾರೆ 2015-16ನೇ ಸಾಲಿನಲ್ಲಿ ವಿವಿಧ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ತೀರುವಳಿ ಮಾಡಲು ಕಡಿಮೆ ಬಡ್ಡಿದರ ನೀಡಿದ ಹುಡ್ಕೋ ಸಂಸ್ಥೆಗೆ ಈ ಕೆಳಕಂಡ ಆಸ್ತಿಗಳನ್ನು ಅಡಮಾನ ಇರಿಸಲಾಗಿತ್ತು.

1. ಕೆಂಪೇಗೌಡ ಮ್ಯೂಸಿಯಂ
2. ಮೇಯೋ ಕಟ್ಟಡ
3. ಮಲ್ಲೇಶ್ವರಂ ಮಾರುಕಟ್ಟೆ
4. ಜಾನ್ಸನ್ ಮಾರುಕಟ್ಟೆ
5. ರಾಜಾಜಿನಗರ ಕಾಂಪ್ಲೇಕ್ಸ್
6. ಬಿಬಿಎಂಪಿ ಸ್ಲಾಟರ್ ಹೌಸ್
7. ಕೆ.ಆರ್. ಮಾರುಕಟ್ಟೆ
8. ದಾಸಪ್ಪ ಆಸ್ಪತ್ರೆ ಕಟ್ಟಡ
9. ಪಬ್ಲಿಕ್ ಯುಟಿಲಿಟಿ ಕಟ್ಟಡ
10. ಬಿಬಿಎಂಪಿ ಕಛೇರಿ ಕಟ್ಟಡ-ಪೂರ್ವ ವಲಯ
11. ಕಲಾಸಿಪಾಳ್ಯ ಮಾರುಕಟ್ಟೆ</td></tr>
<tr><td>ಆ)</td><td>ಆಸ್ತಿ / ಕಟ್ಟಡದ ಮಾರುಕಟ್ಟೆ ಬೆಲೆ ಎಷ್ಟು; ಕೋರಿದ ಅಡಮಾನ ಮೊತ್ತವೆಷ್ಟು; ಪಡೆಯಲಾದ ಸಾಲವೆಷ್ಟು; ಎಲ್ಲಿ ಅಡಮಾನವಿರಿಸಿದೆ; (ವಿವರ ನೀಡುವುದು)</td><td>ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪಡೆದಿರುವ ರೂ. 871.67 ಕೋಟಿಗಳ ಸಾಲಕ್ಕೆ ಈ ಕೆಳಕಂಡ ಆಸ್ತಿಗಳ ಅಡಮಾನ ಮುಂದುವರೆಸಲಾಗಿರುತ್ತದೆ ಹಾಗೂ ಅವುಗಳ ಮಾರುಕಟ್ಟೆ ಬೆಲೆಯ ವಿವರ ಈ ಕೆಳಕಂಡಂತಿರುತ್ತದೆ.

<table>
<tr><th>ಕ್ರ.ಸಂ.</th><th>ಆಸ್ತಿಗಳ ವಿವರಗಳು</th><th>ಮೌಲ್ಯ (ರೂ.ಕೋಟಿಗಳಲ್ಲಿ)</th></tr>
<tr><td>1.</td><td>ಕೆ.ಆರ್. ಮಾರುಕಟ್ಟೆ</td><td>680.47</td></tr>
<tr><td>2.</td><td>ದಾಸಪ್ಪ ಆಸ್ಪತ್ರೆ ಕಟ್ಟಡ</td><td>146.53</td></tr>
<tr><td>3.</td><td>ಪಬ್ಲಿಕ್ ಯುಟಿಲಿಟಿ ಕಟ್ಟಡ</td><td>173.37</td></tr>
<tr><td>4.</td><td>ಬಿಬಿಎಂಪಿ ಕಛೇರಿ ಕಟ್ಟಡ ಪೂರ್ವ ವಲಯ</td><td>128.50</td></tr>
<tr><td>5.</td><td>ಕಲಾಸಿಪಾಳ್ಯ ಮಾರುಕಟ್ಟೆ</td><td>249.95</td></tr>
<tr><td colspan="2">ಒಟ್ಟು</td><td>1378.82</td></tr>
</table>
</td></tr>
<tr><td>ಇ)</td><td>ಅಡಮಾನ ಇರಿಸಿದ ಆಸ್ತಿಗಳಲ್ಲಿ ಎಷ್ಟು ಸಾಲ ತೀರುವಳಿ ಮಾಡಲಾಗಿದೆ; ಯಾವ ಆಸ್ತಿಯನ್ನು ಹಿಂದಕ್ಕೆ ಪಡೆಯಲಾಗಿದೆ; (ಆಸ್ತಿವಾರು, ವರ್ಷಾವಾರು ಬಡ್ಡಿಯೊಂದಿಗೆ ಮಾಹಿತಿ ನೀಡುವುದು)</td><td>ಅಡಮಾನ ಮುಂದುವರೆಸಿದ 5 ಆಸ್ತಿಗಳ ಮೇಲೆ ರೂ. 871.67 ಕೋಟಿಗಳ ಸಾಲವನ್ನು ಪಡೆಯಲಾಗಿದ್ದು, ಪ್ರಸ್ತುತ ನವೆಂಬರ್-2018ರ ಅಂತ್ಯಕ್ಕೆ ರೂ. 219.24 ಕೋಟಿಗಳ ಅಸಲು ಮತ್ತು ರೂ. 44.37 ಕೋಟಿಗಳ ಬಡ್ಡಿಯನ್ನು ಪಾವತಿಸಲಾಗಿರುತ್ತದೆ.</td></tr>
</table>

...2..

ಈ)	ಅಡಮಾನವಿರುವ ಕಟ್ಟಡ ಮತ್ತು ಆಸ್ತಿಯನ್ನು ಬಿಡಿಸಲು ಚಿಂತನೆ ನಡೆದಿದೆಯೇ; ಇದ್ದಲ್ಲಿ ಕ್ರಮಗಳೇನು; (ವಿವರ ನೀಡುವುದು)	2018-19ನೇ ಸಾಲಿನಲ್ಲಿ ಮರುಪಾವತಿ ಮಾಡಲಾದ ಸಾಲದ ಮೊತ್ತಕ್ಕೆ ಎದುರಾಗಿ ಒಂದು ಸ್ಥಿರಾಸ್ತಿಯನ್ನು ಹಿಂಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಪಾಲಿಕೆಯು ವಿವಿಧ ಆದಾಯ ಮೂಲಗಳನ್ನು ಸಮರ್ಪಕವಾಗಿ ಕ್ರೋಢೀಕರಿಸಿ, ಹಂತ ಹಂತವಾಗಿ ಅಡಮಾನವಿರುವ ಆಸ್ತಿಗಳನ್ನು ಹಿಂಪಡೆಯಲು ಕ್ರಮವಹಿಸಲಾಗುತ್ತಿದೆ.
ಉ)	ಅಡಮಾನ ಇರಿಸಿದ ಆಸ್ತಿ / ಕಟ್ಟಡದಿಂದ ಬರುತ್ತಿರುವ ಮಾಹೆಯಾನ ಆದಾಯವೆಷ್ಟು? (ವಿವರ ನೀಡುವುದು)	ಅಡಮಾನ ಇರಿಸಿರುವ ಕಟ್ಟಡಗಳಿಂದ ಬರುವ ಮಾಸಿಕ ವರಮಾನ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ವಿವರಗಳು	ಮಾಸಿಕ ವರಮಾನ (ರೂ.ಗಳಲ್ಲಿ)
1.	ಜಾನ್ಸನ್ ಮಾರುಕಟ್ಟೆ	12,446.00
2.	ಪಬ್ಲಿಕ್ ಯೂಟಿಲಿಟಿ ಬಿಲ್ಡಿಂಗ್	4,219,121.00
3.	ಕೆ.ಆರ್. ಮಾರುಕಟ್ಟೆ	12,32,708.00
4.	ರಾಜಾಜಿನಗರ ವಾಣಿಜ್ಯ ಸಂಕೀರ್ಣ	87,132.00
5.	ಮಲ್ಲೇಶ್ವರಂ ಮಾರುಕಟ್ಟೆ	28,520.00
6.	ಕಲಾಸಿಪಾಳ್ಯ ಮಾರುಕಟ್ಟೆ	10,02,129.00
	ಒಟ್ಟು	65,82,056.00

ಸಂಖ್ಯೆ: ನಅಇ 610 ಎಂಎನ್‌ಜಿ 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು